**<u>4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂಃ 11**

**ಸಿ ಡಬ್ಲ್ಯೂಃ 11**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹ್ಮದಸಲೀಂ ಶೈವಾಲೆ |
| ತಂದೆ ಹೆಸರು | : | ದಾದಾಪೀರ |
| ವಯಸ್ಸು | : | 56 ವರ್ಷಗಳು |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಲೈನ ಬಜಾರ, ಧಾರವಾಡ |

ದಿನಾಂಕಃ 29.09.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಕಾಕರ ಓಣಿಯಲ್ಲಿ ಕಿರಾಣಿ ಅಂಗಡಿ ಇರುತ್ತದೆ. ಪರಶುರಾಮ ಸುಣಗಾರ ನಮ್ಮ ಅಂಗಡಿಯಲ್ಲಿ ಗಿರಾಕಿ ಇರುತ್ತಾನೆ. ಆತನ ಮಗಳು ತನುಜಾಳ ಪರಿಚಯ ಇಲ್ಲ. ಸದರಿ ಹುಡುಗಿಯು ಯಾರನ್ನು ಮದುವೆಯಾಗಿದ್ದಾಳೆ ಎಂದು ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ವಿಸಿ ಮೂಲಕ ತೋರಿಸಿದ ಆರೋಪಿಯ ಪರಿಚಯ ಇಲ್ಲ. ಪರಶುರಾಮನ ಮಗಳಿಗೆ ಯಾವುದೇ ಪೆಟ್ಟಾದ ವಿಷಯ ನನಗೆ ಮಾಹಿತಿ ಇಲ್ಲ. ಸದರಿ ಘಟನೆಯ ಬಗ್ಗೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

ಈಗ ನನಗೆ ಓದಿ ಹೇಳಿದಂತೆ ಪೋಲಿಸರ ಮುಂದೆ ನಾನು ಕೊಟ್ಟ ಹೇಳಿಕೆಯಲ್ಲಿ ಪರಶುರಾಮ ಸುಣಗಾರನಿಗೆ ನಾಲ್ಕು ಜನ ಹೆಣ್ಣು ಮಕ್ಕಳಿದ್ದು ತನುಜಾ ಇವಳು ಶಿವಶಂಕರನನ್ನು ಪ್ರೀತಿಸುತ್ತಿದ್ದು, ಆತನೊಂದಿಗೆ ಮನೆ ಬಿಟ್ಟು ಹೋಗಿದ್ದು ಮುರು ತಿಂಗಳ ಹಿಂದೆ ವಾಪಸು ತಂದೆ ಮನೆಗೆ ಬಂದಿದ್ದು ಓಣಿಯಲ್ಲಿ ಸುದ್ದಿಯಾಗಿದ್ದರಿಂದ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿಃ21-02-2022 ರಂದು ಮಧ್ಯಾಹ್ಣ 11.30 ಗಂಟೆಗೆ ಓಣಿಂದುಲ್ಲಿ ಪರಶುರಾಮನ ಮನೆಯ ಹತ್ತಿರ ಜನರು ಸೇರಿಕೊಂಡಿದ್ದು ನಾನು ಹೋಗಿ ನೋಡಿದಾಗ ಪರಶುರಾಮನ ಮಗಳಾದ ತನುಜಾಳ ತೊಡೆಗೆ ಗಾಯವಾಗಿದ್ದು ರಕ್ತ ಬರುತ್ತಿತ್ತು. ಆಗ ನಾನು ವಿಚಾರಿಸಿದಾಗ ಶಿವಶಂಕರನು ತನುಜಾಳ ಮನೆಯಲ್ಲಿ ಒಬ್ಬಳೇ ಇದ್ದಾಗ ಕಪ್ಪಾಳಕ್ಕೆ ಹೊಡೆದು ಆತನು ತನುಜಾಳ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದ ಎಂದು ಆಕೆ ಜೋರಾಗಿ ಚೀರಿದಳು ಮತ್ತು ಜನ ಸೇರಿದಾಗ ಆತನು ಓಡಿ ಹೋಗಿರುತ್ತಾನೆ ಎಂದು ನನಗೆ ವಿಷಯ ತಿಳಿಯಿತು ಎಂದರೆ ಸರಿಯಲ್ಲ.

ಆತನು ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಶಿವಶಂಕರನು ಚುಚ್ಚಿದ್ದಾನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾನೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಂತರ ಆಕೆಯ ತಂದೆ ಬಂದಿದ್ದು ಆಟೋದಲ್ಲಿ ದವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ನಾನು ನಿಶಾನೆ ಪಿ–14 ರಪ್ರಕಾರ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿಎನಜೆ (ಎಲಎಡಿಸಿ) ವಕೀಲರಿಂದ:**
ಎನೂ ಇಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.